ಹೊನ್ನಾಳಿ ತಾಲ್ಲೂಕನ್ನು ದಾವಣಗೆರೆ ಜಿಲ್ಲೆಗೆ ಸೇರಿಸದೆ ಶಿವಮೊಗ್ಗ ಜಿಲ್ಲೆಯಲ್ಲಿ ಉಳಿಸುವುದು.

ಶ್ರೀ ಎಚ್.ಬಿ. ಕೃಷ್ಣಮೂರ್ತಿ (ಹೊನ್ನಾಳಿ) : ಶಿವಮೊಗ್ಗ ಜಿಲ್ಲೆಯ ಹೊನ್ನಾಳಿ ತಾಲ್ಲೂಕನ್ನು ಈಗ ಜಿಲ್ಲೆಯಾಗಲಿರುವ ದಾವಣಗೆರೆ ವಿಭಾಗಕ್ಕೆ ಸೇರ್ಪಡೆ ಮಾಡಲಿರುವ ವಿಷಯವು ಈಗ ಸರ್ಕಾರದ ಮುಂದಿರುವುದು ಸರಿಯಷ್ಟೆ. ಈ ವಿಚಾರದ ಬಗ್ಗೆ ಪುನರ್ ಪರಿಶೀಲಿಸಿ, ಈ ತೀರ್ಮಾನವನ್ನು ಕೈಬಿಡುವಂತೆ ಇದಕ್ಕೆ ಪೂರಕವಾಗಿ ನಾನು ಕೆಳಕಂಡಂತೆ ಕೆಲವು ಅಂಶಗಳನ್ನು ಸರ್ಕಾರದ ಗಮನಕ್ಕೆ ತರಲಿಚ್ಚಿಸುತ್ತೇನೆ.

ಹೊನ್ನಾಳಿಯು ಭೌಗೋಳಿಕವಾಗಿ ಜಿಲ್ಲಾ ಕೇಂದ್ರವಾದ ಶಿವಮೊಗ್ಗಕ್ಕೆ ಕೇವಲ40 ಕಿ.ಮೀ. ಗರಿಷ್ಠ ಅಂತರದಲ್ಲಿದೆ. ಇದರಿಂದಾಗಿ, ತಾಲ್ಲೂಕಿನ ನಾಗರಿಕರಿಗೆ ಜಿಲ್ಲಾ ಕೇಂದ್ರಸ್ಥಾನಕ್ಕೆ ಹೋಗಿಬರಲು ತುಂಬಾ ಅನುಕೂಲವಾಗಿರುತ್ತದೆ. ಮುಂದೆ ಜಿಲ್ಲಾ ಕೇಂದ್ರವಾಗಲಿರುವ ದಾವಣಗೆರೆಯು ಹೊನ್ನಾಳಿ ತಾಲ್ಲೂಕಿನ ಗಡಿಯಿಂದ ಸುಮಾರು ನೂರು ಕಿ.ಮೀ. ಅಂತರದಲ್ಲಿರುವುದರಿಂದ, ತಾಲ್ಲೂಕಿನ ಜನತೆಗೆ ಜಿಲ್ಲಾ ಕೇಂದ್ರಸ್ಥಾನಕ್ಕೆ ಹೋಗಿಬರಲು ಅಂತರ ತುಂಬಾ ಹೆಚ್ಚಾಗುತ್ತದೆ. ಇದರಿಂದಾಗಿ, ಆಡಳಿತಾತ್ಮಕ ಅನುಕೂಲತೆಗಿಂತ ಅನಾನುಕೂಲತೆ ಹೆಚ್ಚಾಗುತ್ತದೆ. ಹೊನ್ನಾಳಿಯನ್ನು ಈಗ ದಾವಣಗೆರೆ ಜಿಲ್ಲೆಗೆ ಸೇರಿಸುವುದನ್ನು ವಿರೋಧಿಸಿ ಈ ಬಗ್ಗೆ ಹೋರಾಟ ಸಮಿತಿಯು ರಚಿತವಾಗಿ, ತಾಲ್ಲೂಕಿನ 21 ಮಂಡಲಪಂಚಾಯಿತಿಗಳ ಸದಸ್ಯರು, ತಾಲ್ಲೂಕು ಪಂಚಾಯಿತಿಯ ಎಲ್ಲಾ ಸದಸ್ಯರು ಜಿ.ಪಂ. ಸದಸ್ಯರು ಪಕ್ಷಭೇದವಿಲ್ಲದೇ ತೀವ್ರವಾಗಿ ಚಳುವಳಿ ನಡೆಸುತ್ತಿದ್ದಾರೆ.

ಆಡಳಿತಾತ್ಮಕರಾಗಿ, ಭೌಗೋಳಿಕವಾಗಿ ಹಾಗೂ ಭಾವನಾತ್ಮಕವಾಗಿ ಹೊನ್ನಾಳಿ ತಾಲ್ಲೂಕು ಶಿವಮೊಗ್ಗ ಜಿಲ್ಲೆಯಲ್ಲಿಯೇ ಉಳಿಯುವುದು ಅತ್ಯಂತ ಸಮರ್ಪಕವಾದ ವಿಚಾರವಾಗಿದೆ. ದಾವಣಗೆರೆ ಜಿಲ್ಲೆಯ ರಚನೆಗೆ ಹೊನ್ನಾಳಿಯನ್ನು ಕೈಬಿಡುವುದರಿಂದ, ಯಾವುದೇ ಸಮಸ್ಯೆ ಇರುವುದು ಸಾಧ್ಯವಿಲ್ಲವಾದ್ದರಿಂದ, ದಯಮಾಡಿ ಹೊನ್ನಾಳಿ ತಾಲ್ಲೂಕನ್ನು ದಾವಣಗೆರೆ ಜಿಲ್ಲೆಗೆ ಸೇರ್ಪಡೆಮಾಡದೇ ಶಿವಮೊಗ್ಗ ಜಿಲ್ಲೆಗೇ ಸೇರಿರುವಂತೆ ನೋಡಿಕೊಳ್ಳಬೇಕಾಗಿ ಕೋರಿಕೆ.

ಶ್ರೀ ಕೆ.ಎಸ್. ಈಶ್ವರಪ್ಪ : ಮಾನ್ಯ ಅಧ್ಯಕ್ಷರೇ ಮೊನ್ನೆ ರಜಾ ಇದ್ದ ದಿವಸ ನಾನೂ ಸನ್ಮಾನ್ಯ ಯಡಿಯೂರಪ್ಪನವರೂ, ಆರಗ ಜ್ಞಾನೇಂದ್ರ ಅವರೂ, ಅಯನೂರು ಮಂಜೂನಾಥ್ ಅವರೂ ಹೊನ್ನಾಳಿಗೆ ಹೋಗಿದ್ದೆವು. ಪಕ್ಷಾತೀತವಾಗಿ ಎಲ್ಲರದ್ದೂ ಬೇಡಿಕೆ ಅದೇನೆ. ಯಾವ ಕಾರಣಕ್ಕೂ ಕೂಡ ಹೊನ್ನಾಳಿ ದಾವಣಗೆರೆಗೆ ಸೇರುವುದು ಬೇಡ, ಶಿವಮೊಗ್ಗಕ್ಕೆ ಬೇಕು. ಜಿಲ್ಲಾಧಿಕಾರಿಗಳ ಕಛೇರಿಗೆ ಬೇರೆ ಬೇರೆ ಕಛೇರಿಗಳಿಗೆ ಅನುಕೂಲ ಆಗುತ್ತದೆ ಎಂದು ಹೇಳಿ ಕೋಳ್ಳುತ್ತಿದ್ದೇವೆ ದಯವಿಟ್ಟು ಹೊನ್ನಾಳಿಯನ್ನು ಶಿವಮೊಗ್ಗಕ್ಕೆ ಉಳಿಸಿಕೊಡಬೇಕೆಂದು ಹೇಳಿ ನನ್ನ ಒತ್ತಾಯ ಅಷ್ಟೇ.

ಅಧ್ಯಕ್ಷರು : ಹೊನ್ನಾಳಿ ಶಿವಮೊಗ್ಗ ಜಿಲ್ಲೆಯಲ್ಲಿ ಇರುತ್ತದಾ, ದಾವಣಗೆರೆಗೆ ಹೋಗುತ್ತದಾ ಮಾನ್ಯ ಉಪ ಮುಖ್ಯಮಂತ್ರಿಗಳು ತಮ್ಮ ತೀರ್ಮಾನ ಹೇಳಿ.

ಶ್ರೀ ಸಿದ್ಧರಾಮಯ್ಯ (ಮಾನ್ಯ ಉಪ ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ಈಗಾಗಲೇ ಪ್ರಿಲಿಮಿನರಿ ನೋಟಿಫಿಕೇಶನ್ ಹೊರಡಿಸಿ ಜಿಲ್ಲೆ ಮಾಡುವುದರ ಬಗ್ಗೆ ಸಾರ್ವಜನಿಕರಿಂದ ಮತ್ತು ಸಂಬಂಧಪಟ್ಟವರಿಂದ ಅಬ್ಜೆಕ್ಷನ್ಸ್ ಕೂಡ ಎಲ್ಲಾ ಕಾಲಫಾರ್ ಮಾಡಿದ್ದೇವೆ. ಅಬ್ಜೆಕ್ಷನ್‌ಗಳನ್ನೆಲ್ಲಾ ನೋಡಿದ ಮೇಲೆ ಅಂತಿಮವಾದ ಅಧಿಸೂಚನೆ ಆಗಿದೆ ಎಂದು ಹೇಳಿ ನನಗೆ ಬಂದಿರುವ ಮಾಹಿತಿ. ನಾನು ಖಚಿತವಾದಂತಹ ಮಾಹಿತಿಯನ್ನು ತರಿಸಿ ಆ ಮೇಲೆ ಉತ್ತರ ಕೊಡುತ್ತೇನೆ.

ಸ್ವಾತಂತ್ಯೋಧರಿಗೆ ಮಾಸಾಶನದಲ್ಲಿ ಹೆಚ್ಚಳ

ಶ್ರೀ ಡಿ.ಆರ್. ಪಾಟೀಲ್ (ಧಾರವಾಡ ಗ್ರಾಮಾಂತರ) : ಮಾನ್ಯ ಅಧ್ಯಕ್ಷರೆ, ರಾಜ್ಯ ಸರ್ಕಾರ ಸ್ವಾತಂತ್ರ ಯೋಧರಿಗೆ ಕೊಡುವಂತಹ ಮಾಸಾಶನವನ್ನು ಹೆಚ್ಚಿಗೆ ಮಾಡುತ್ತೇವೆ ಎನ್ನುವಂತಹ ಭರವಸೆಯನ್ನು ಕೊಟ್ಟಿತ್ತು. ಇನ್ನೂ ಹೆಚ್ಚಿಗೆ ಮಾಡಿಲ್ಲ. ಅದಕ್ಕೆ ಅದನ್ನು ಆಗಸ್ಟ್ 15 ರೊಳಗೆ ಹೆಚ್ಚು ಮಾಡುವಂತಹ ಕೆಲಸವನ್ನು ಮಾಡಬೇಕು. ಆಮೇಲೆ ಸಾರಿಗೆ ಸಚಿವರು ಇವರಿಗೆ ಬಸ್ ಪಾಸ್‌ನ್ನು ಒಬ್ಬರಿಗೇ ಕೊಟ್ಟಿದ್ದಾರೆ. ಬಹುತೇಕ ಸ್ವಾತಂತ್ಯ ಯೋಧರು ವಯಸ್ಸಾದವರು ಇದ್ದಾರೆ. ಒಬ್ಬರ ಜೊತೆಗೆ ಇನ್ನೊಬ್ಬ ಸಹಾಯಕರಿಗೂ ಅವಕಾಶ ಕಲ್ಪಿಸಿ ಕೊಟ್ಟರೆ ಹೆಚ್ಚು ಅನುಕೂಲ ಆಗುತ್ತದೆ.

ಶ್ರೀ ಸಿದ್ಧರಾಮಯ್ಯ : ಈ ವರ್ಷ 1997-98ರ ಬಜೆಟ್‌ನಲ್ಲಿ 500 ರೂಪಾಯಿ ಮಾಸಾಶನ ಇದ್ದುದನ್ನು 750 ರೂಪಾಯಿ ಮಾಸಾಶನ ಕೊಡಬೇಕು ಎಂದು ತೀರ್ಮಾನ ಮಾಡಿದ್ದೇವೆ. ಅದನ್ನು ಈ ಆಗಸ್ಟ್ 15 ಕ್ಕೆ ಜಾರಿಗೆ ಕೊಡಲಾಗುತ್ತದೆ.

ಅಧ್ಯಕ್ಷರು : ಗುಡ್ ನ್ಯೂಸ್.

ಶ್ರೀ ಪಿ.ಜಿ. ಆರ್. ಸಿಂಧ್ಯ (ಸಾರಿಗೆ ಸಚಿವರು) : ವಯಸ್ಸಾಗಿರತಕ್ಕವರು ಅವರ ಜೊತೆಯಲ್ಲಿ ಇನ್ನೊಬ್ಬರು ಹೋಗಬೇಕು ಎಂದು ಈಗಾಗಲೇ ಕೆಎಸ್‌ಆರ್‌ಟಿಸಿ ಮತ್ತು ಸರ್ಕಾರದಿಂದ ಒಪ್ಪಿಗೆ ಕೊಟ್ಟು ಸಂಬಂಧಪಟ್ಟ ಸರ್ಕಾರದ ಆಜ್ಞೆಯನ್ನೂ ಸಹ ಹೊರಡಿಸಿದ್ದೇವೆ.

ಹುಬ್ಬಳ್ಳಿ ಮಹಾನಗರದ ಕಿಮ್ಸ್ ಆಸ್ಪತ್ರೆಯ ನೌಕರರಲ್ಲಿರುವ ಗೊಂದಲ.

ಶ್ರೀ ಜಗದೀಶ ಶೆಟ್ಟರ್ (ಹುಬ್ಬಳ್ಳಿ ಗ್ರಾಮಾಂತರ) : ಮಾನ್ಯ ಅಧ್ಯಕ್ಷರೆ, ಹುಬ್ಬಳ್ಳಿ ಮಹಾ ನಗರದ ಕಿಮ್ಸ್ ಆಸ್ಪತ್ರೆಯ ನೌಕರ ವರ್ಗವು ಕಳೆದ ಒಂದು ವಾರದಿಂದ ಧರಣಿ ಸತ್ಯಾಗ್ರಹ ಮಾಡುತ್ತಿದ್ದಾರೆ ತಮ್ಮ ಬೇಡಿಕೆಯ ಈಡೇರಿಕೆಗಾಗಿ. ಅವರಿಗೆ ಮೊದಲು ಕೆಎಂಸಿ ಇತ್ತು, ಕೆಎಂಸಿ, ಕಿಮ್ಸ್ ಆಗಿ ಸ್ವಾಯತ್ತ ಸಂಸ್ಥೆ ಆದ ನಂತರ ಅಲ್ಲಿದ್ದಂತಹ ನೌಕರರಿಗೆ ತಮ್ಮ ಸೇವಾ ಭದ್ರತೆಯ ಬಗ್ಗೆ ಗೊಂದಲ ಉಂಟಾಗಿದೆ. ಮತ್ತು ಇಲ್ಲಿಯವರೆಗೆ ಸ್ವಾಯತ್ತ ಸಂಸ್ಥೆಯಾಗಿ ಒಂದು ವರ್ಷ ಆದ ನಂತರವೂ ಸಹ ಅವರ ಸಂಬಳ ಟ್ರೆಜರಿ ಮುಖಾಂತರ ಆಗುತ್ತಿತ್ತು, ಬಟವಾಡೆ ಆಗುತ್ತಿತ್ತು. ಆದರೆ ಈಗ ನಿರ್ದೇಶಕರು ತಾವೇ ತಮ್ಮ ಹತೋಟಿಗೆ ಕೊಡುತ್ತೇವೆ ಎಂದು ಹೇಳಿದ್ದರ ಬಗ್ಗೆ ಸೇವಾ ಗೊಂದಲ ಉಂಟಾಗಿ ಇವತ್ತು ನೌಕರರ ವರ್ಗ ಸತ್ಯಾಗ್ರಹ ಮಾಡುತ್ತಿದ್ದಾರೆ. ಅದರಿಂದ ಕಿಮ್ಸ ಆಸ್ಪತ್ರೆಯ ರೋಗಿಗಳಿಗೂ ಅನಾನುಕೂಲ ಆಗಿದೆ. ಮತ್ತು ನೌಕರ